# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ಭೂಮಿ ವ್ಯವಹಾರಗಳಲ್ಲಿ ಲಾಭ ಗಳಿಸುವ ಅವಕಾಶ. ಮನೆಗೆ ಅಗತ್ಯ ವಸ್ತುಗಳ ಖರೀದಿ. ಉದ್ಯೋಗದಲ್ಲಿ ಬಡ್ತಿ ಯೋಗ. ಮನೆ ನಿರ್ಮಾಣ ಅಥವಾ ನಿವೇಶನ ಖರೀದಿಗೆ ಸಾಲಕ್ಕಾಗಿ ಯತ್ನ. ಆರೋಗ್ಯ ವಿಚಾರದಲ್ಲಿ ಹೆಚ್ಚಿನ ಆತಂಕ ಪಡುವ ಅಗತ್ಯವಿಲ್ಲ. ಶುಭ: 6, 10, 22 ಅಶುಭ: 11, 14, 25



**ವೃಷಭ:** ಸ್ನೇಹಿತರಿಗೆ ಸಾಲ ನೀಡಿದರೆ ವಾಪಸ್ ಬರುವುದು ಕಷ್ಟ. ಕಾನೂನು ವಿಚಾರಗಳಲ್ಲಿ ಹಿನ್ನಡೆ ಉಂಟಾಗಬಹುದು, ಎಚ್ಚರಿಕೆಯಿಂದ ನಿರ್ವಹಿಸಿ. ಬೇರೆಯವರ ವಸ್ತುಗಳು ಅಥವಾ ಹಣದ ಜವಾಬ್ದಾರಿ ವಹಿಸಿಕೊಳ್ಳಬೇಡಿ.  ವಾಹನ ಚಾಲನೆ ಮಾಡುವಾಗ ಎಚ್ಚರ. ಶುಭ: 2, 19, 26 ಅಶುಭ: 11, 18, 25



**ಮಿಥುನ:** ಹಲವು ಅವಕಾಶಗಳು ಹುಡುಕಿಕೊಂಡು ಬರಲಿವೆ. ನಿಮಗೆ ಯಾವುದು ಸೂಕ್ತ ಎನ್ನುವ ಬಗ್ಗೆ ಸ್ಪಷ್ಟತೆ ಇರಲಿ. ಸರ್ಕಾರಿ ನೌಕರರಿಗೆ ವರ್ಗಾವಣೆ ಸಾಧ್ಯತೆ. ವೈಯಕ್ತಿಕ ಸಂಬಂಧವನ್ನು ಎಚ್ಚರಿಕೆಯಿಂದ ನಿರ್ವಹಿಸಿ. ವ್ಯಾಪಾರ–ವ್ಯವಹಾರದಲ್ಲೂ ಉತ್ತಮ ಅವಕಾಶಗಳು ಬರಲಿವೆ. ಶುಭ: 12, 19, 28 ಅಶುಭ: 8, 14, 22



**ಕರ್ಕ:** ಆದಾಯದಲ್ಲಿ ಹೆಚ್ಚಳ. ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಪ್ರತಿಫಲ ದೊರೆಯುವುದು. ಸಾಮಾಜಿಕ ವರ್ಚಸ್ಸು, ಕೀರ್ತಿ ಹೆಚ್ಚುವುದು. ವಿದ್ಯಾರ್ಥಿಗಳಿಗೆ ಯಶಸ್ಸು. ಕ್ರೀಡಾ ಕ್ಷೇತ್ರದಲ್ಲಿ ಪ್ರಯತ್ನಿಸುತ್ತಿರುವವರಿಗೆ ಯಶಸ್ಸು. ಹಣಕಾಸಿನ ವ್ಯವಹಾರದ ಬಗ್ಗೆ ಎಚ್ಚರಿಕೆ ಇರಲಿ. ಶುಭ: 10, 12, 28 ಅಶುಭ: 9, 17, 26



**ಸಿಂಹ:** ವೈಯಕ್ತಿಕ ವರ್ಚಸ್ಸು, ಗೌರವದ ನೆರವಿನಿಂದ ಇತರರಿಗೆ ಸಹಾಯ ಮಾಡಲು ಮುಂದಾಗುವಿರಿ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡುತ್ತಿರುವವರಿಗೆ ಸಕಾಲ. ಮಕ್ಕಳ ವರ್ತನೆ, ನಡವಳಿಕೆಯಿಂದ ಸಂತೋಷ. ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಶುಭ: 12, 15, 21 ಅಶುಭ: 9, 14, 26



**ಕನ್ಯಾ:** ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ನಿಮಗೂ ಕೆಮ್ಮು ನೆಗಡಿಯಂಥ ಅನಾರೋಗ್ಯ ಕಾಡಬಹುದು. ತಿಂಗಳ ಮೊದಲಾರ್ಧದ ನಂತರ ಆರ್ಥಿಕ ಬಲ ಬರುತ್ತದೆ. ಉಳಿತಾಯ ಮಾಡುವ ಮನಸ್ಸು ಮಾಡುವಿರಿ. ಮಕ್ಕಳ ಪ್ರಗತಿಯಿಂದ ಹೆಮ್ಮೆ, ಸಂತೋಷ. ಶುಭ: 14, 22, 28 ಅಶುಭ: 11, 18, 29



**ತುಲಾ:** ಉದ್ಯೋಗ, ವ್ಯಾಪಾರ ನಿಮಿತ್ತ ದೂರ ಪ್ರಯಾಣ ಮಾಡಬೇಕಾಗಬಹುದು. ಹಣ ಹೂಡಿಕೆಯಲ್ಲಿ ಲಾಭ. ಉದ್ಯೋಗ ಸ್ಥಳದಲ್ಲಿ ಒತ್ತಡ ಕಾಣಿಸಿಕೊಳ್ಳಬಹುದು. ಆರೋಗ್ಯದಲ್ಲೂ ಏರು ಪೇರಾಗುತ್ತದೆ. ಸಂತಾನ ನಿರೀಕ್ಷೆಯಲ್ಲಿರುವ ದಂಪತಿಗೆ ಶುಭಸುದ್ದಿ. ಶುಭ: 11, 16, 23 ಅಶುಭ: 10, 15, 27



**ವೃಶ್ಚಿಕ:** ಹೊಸದಾಗಿ ಮನೆ ಕಟ್ಟಬೇಕೆಂದು ಆಲೋಚನೆ ಮಾಡುತ್ತಿರುವವರಿಗೆ ಸೂಕ್ತ ಸಮಯ. ನೌಕರಸ್ಥರಿಗೆ ಮೇಲಧಿಕಾರಿಗಳ ಜತೆಗೆ ಉತ್ತಮ ಸಂಬಂಧ ಇರುತ್ತದೆ. ಸಂಗಾತಿ ಜತೆಗೆ ಪ್ರಮುಖವಾದ ವಿಚಾರಗಳ ಚರ್ಚೆ ನಡೆಯುವುದು. ಸಕಾರಾತ್ಮಕ ಬೆಳವಣಿಗೆಗಳನ್ನು ಕಾಣುವಿರಿ. ಶುಭ: 12, 18, 29 ಅಶುಭ: 11, 20, 27



**ಧನು:** ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಸ್ಥರಿಗೆ ಸಮಸ್ಯೆಗಳು ಎದುರಾಗುವ ಸಂಭವ. ತಲೆ, ಹಲ್ಲು ನೋವು ಕಾಣಿಸಿಕೊಳ್ಳುತ್ತದೆ. ವೈವಾಹಿಕ ಜೀವನ ಚೆನ್ನಾಗಿರುತ್ತದೆ. ಸಂಗಾತಿ ಜತೆಗೆ ಸುಮಧುರ ಕ್ಷಣಗಳನ್ನು ಕಳೆಯಲಿದ್ದೀರಿ. ಭೂಮಿ ಖರೀದಿಗೆ ಸುಸಮಯ. ಶುಭ: 7, 11, 27 ಅಶುಭ: 9, 13, 29



**ಮಕರ:** ಸಾಮಾಜಿಕ, ರಾಜಕೀಯ ಅಭಿವೃದ್ಧಿಗೆ ಅವಕಾಶಗಳು ದೊರೆಯುತ್ತವೆ. ಜನಪ್ರಿಯತೆ ಹೆಚ್ಚಾಗಲಿದೆ. ವಿದ್ಯಾರ್ಥಿಗಳು ಶ್ರಮದಿಂದ ಅಂದುಕೊಂಡ ಗುರಿ ತಲುಪುವರು. ಕೋರ್ಟ್ ವ್ಯಾಜ್ಯಗಳಿಗೆ ಹಣ ಖರ್ಚಾಗುವುದು. ಆರೋಗ್ಯ ಉತ್ತಮ. ಶುಭ: 6, 14, 23 ಅಶುಭ: 8, 18, 25



**ಕುಂಭ:** ಕೌಟುಂಬಿಕ ವಿಚಾರಗಳಲ್ಲಿ ಪ್ರಗತಿ. ಬಂಡವಾಳ ಹೂಡಿಕೆಗೆ ಅವಕಾಶಗಳನ್ನು ಪರಿಶೀಲಿಸಿ, ಅತ್ಯುತ್ತಮವಾದದ್ದನ್ನು ಆರಿಸಿಕೊಳ್ಳಿ. ಮಕ್ಕಳ ಮದುವೆಗೆ ಪ್ರಯತ್ನಿಸಿದಲ್ಲಿ ಉತ್ತಮ ಸಂಬಂಧ ದೊರೆಯುವುದು. ನೆಂಟರು ಸಹಾಯ ಕೇಳಿಕೊಂಡು ಬರಬಹುದು. ಶುಭ: 10, 16, 22 ಅಶುಭ: 11, 18, 27



**ಮೀನ:** ಮನೆಯಲ್ಲಿ ಶುಭಕಾರ್ಯ ಆಯೋಜಿಸುವಿರಿ. ಉದ್ಯೋಗಿಗಳಿಗೆ ಮೇಲಧಿಕಾರಿಗಳಿಂದ ಮೆಚ್ಚುಗೆ. ವ್ಯಾಪಾರ–ವ್ಯವಹಾರ ಮಾಡುತ್ತಿರುವವರಿಗೆ ಆದಾಯದಲ್ಲಿ ಹೆಚ್ಚಳ. ಶ್ವಾಸಕೋಶ ಸಮಸ್ಯೆ ಹಾಗೂ ರಕ್ತದಲ್ಲಿನ ದೋಷದಿಂದ ಅನಾರೋಗ್ಯ ಉಂಟಾಗುವ ಸಂಭವವಿದೆ. ಶುಭ: 10, 16, 21 ಅಶುಭ: 12, 19, 27